Construction of General Hostel Building in Biligere

473. Sri V. L. SHIVAPPA (Tiptur).—

Will the Minister for Education be pleased to state :—

(*a*) whether it is a fact that as far back as six years the initial deposit of 25 per cent towards the cost of building a General Hostel in Biligere, Tiptur Taluk was made;

(*b*) if so, the reason for not according sanction for its construction so far;

(*c*) whether Government intends to sanction the Hostel without insisting on the new rules being implemented namely to deposit 50 per cent of the cost of the building ?

Sri N. M. KOTRABASIAH SOGI (Deputy Minister for Education).—

(*a*) Yes.

(*b*) The proposal has been recently received from the Divisional Commissioner and is being processed in consultation with the D.P.I.

(*c*) No.

ಶ್ರೀ ಎ. ಎರ್. ಶಿವಪ್ಪ.—ನಮ್ಮವರು 6 ವರ್ಷಗಳ ಹಿಂದೆಯೇ ಈ ಕಟ್ಟಡಕ್ಕಾಗಿ ಏಳೂವರೆ ಸಾವಿರ ರೂಪಾಯಿಗಳನ್ನು ಠೇವಣಿಯಾಗಿ ಇಟ್ಟಿದ್ದರೂ ಕೂಡ, ಈ ಬಗ್ಗೆ ಸಲಹೆಯು ಇತ್ತೀಚೆಗೆ ವಿಭಾಗಾಧಿಕಾರಿಯವರಿಂದ ಬಂದಿದೆ ಎಂದು ಹೇಳಿದ್ದೀರಿ. ಮತ್ತು 25 ಪರ್‌ಸೆಂಟ್‌ಗೆ ಬದಲಾಗಿ 50 ಪರ್‌ಸೆಂಟ್ ಹಣವನ್ನು ಠೇವಣಿ ಇಡಬೇಕೆಂದು ಸಹ ಕೇಳುತ್ತಿದ್ದಾರೆ. ಅಧಿಕಾರಿಗಳು ಮಾಡಿದ ತಪ್ಪಿಗಾಗಿ ಈ ರೀತಿ ಠೇವಣಿ ಹಣವನ್ನು ಜಾಸ್ತಿ ಕೇಳುವುದು ಸರಿಯೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಪ್ರಪೋಸರ್‌ನ್ನು ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿಯನ್ನು ಅಧಿಕಾರಿಗಳು ಕಳಿಸುವುದು ತಡವಾಯಿತು. ಸರ್ಕಾರಕ್ಕೆ ಸ್ವಲ್ಪ ದಿವಸಗಳ ಹಿಂದೆ ಬಂದಿದೆ. ಅದನ್ನು ಪರಿಶೀಲನೆ ಮಾಡಿ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎಂ. ನಾಗಪ್ಪ —6 ವರ್ಷದ ಹಿಂದೆಯೇ ಹಣವನ್ನು ಠೇವಣಿ ಇಟ್ಟಿದ್ದಾರೆ. ಈಗ 50 ಪರ್‌ಸೆಂಟ್ ಠೇವಣಿ ಕೊಡಬೇಕೆಂದು ಹೇಳುವುದು ಸರಿಯಲ್ಲ. ಏಕೆಂದರೆ ತಪ್ಪಾಗಿರುವುದು ನಿಮ್ಮ ಅಧಿಕಾರಿಗಳಿಂದ. ಆದ್ದರಿಂದ ಈ ಕೇಸ್‌ನ ವಿಚಾರದಲ್ಲಿ ಹಿಂದಿನ ರೂಲ್ಸ್‌ನ್ನೇ ಅಪ್ಲೈ ಮಾಡಿ 25 ಪರ್ಸೆಂಟ್ ಠೇವಣಿ ತಗೆದುಕೊಂಡು ವಿದ್ಯಾರ್ಥಿನಿಲಯದ ಕಟ್ಟಡವನ್ನು ಕಟ್ಟಿಸಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರಕ್ಕೆ ಪ್ರಪೋಸರ್ ಬಂದಿರುವುದು ಇತ್ತೀಚೆಗೆ.

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ತಪ್ಪಿಗೆ ಅಲ್ಲಿಯ ಜನರು ಶಿಕ್ಷೆ ಅನುಭವಿಸಬೇಕೇ ?

(ಉತ್ತರವಿಲ್ಲ)

ಶ್ರೀ ಬಿ. ಪಿ. ಗಂಗಾಧರ್.—ಸರ್ಕಾರದವರು ಹೇಳಿದ ಪ್ರಕಾರ ಸಾರ್ವಜನಿಕರು 6 ವರ್ಷದ ಕೆಳಗೆ 25 ಪರ್ಸೆಂಟ್ ಠೇವಣಿ ಇಟ್ಟಿದ್ದಾರೆ. ಆ ರೀತಿ ಹಣ ಕಟ್ಟಿದ್ದರೂ ಕೂಡ ಸರ್ಕಾರದವರು ಈಗ 50 ಪರ್ಸೆಂಟ್ ಠೇವಣಿ ಕೇಳುತ್ತಿರುವುದು ತಮ್ಮ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವುದ ಕ್ಕಾಗಿ ಎಂದು ಕಾಣುತ್ತದೆ. ಯಾವುದೇ ದೇಶದ ಒಂದು ಸರ್ಕಾರವೇ ಆಗಲಿ, ಒಂದು ಸಂಸ್ಥೆಯೇ ಆಗಲೀ ಕೊಟ್ಟ ಆದೇಶವನ್ನು ಪಾಲನೆ ಹಿಂದಕ್ಕೆ ಹೋದರೆ ಕೋರ್ಟ್ ಮೂಲಕ ಬೇಕಾದರೆ ಕ್ರಮ

(ಶ್ರೀ ಟಿ. ಪಿ. ಗಂಗಾಧರ್)

ಜರುಗಿಸಬಹುದು. ಈ ರೀತಿ ಮಾಡಿದರೆ ಮರ್ಯಾದೆ ಉಳಿಯುವುದಿಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಹಿಂದೆ ಏನು ಆದೇಶ ಕೊಟ್ಟಿದ್ದರೋ ಅದರಂತೆ ಆ ಕೆಲಸವನ್ನು ಮುಂದುವರೆಸುವುದಕ್ಕೆ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯಾರಿಂದ ತಪ್ಪಾಗಿದೆ ಎಂಬುದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ವಿ. ಎರ್. ಶಿವಪ್ಪ.—ಗ್ರಾಮಸ್ಥರಿಂದ ಏನೂ ತಪ್ಪಾಗಿರದೆ ಕೇವಲ ಅಧಿಕಾರಿಗಳದ್ದೇ ತಪ್ಪು ಇದ್ದರೆ ಸರ್ಕಾರದವರು ಖಂಡಿತವಾಗಿಯೂ ಕೂಡ ಹಿಂದಿನ ನಿಯಮದಂತೆ ಠೇವಣಿ ಪಡೆದು ಕೊಂಡು ಕಟ್ಟಡವನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ.—1961ನೇ ಇಸವಿಯಲ್ಲಿ ದುಡ್ಡು ಕೊಡುವಾಗ ಸರಕಾರದವರಿಗೆ ದುಡ್ಡು ಕೊಟ್ಟದ್ದು ಯಾವಾಗ ಮತ್ತು ಶೇಕಡಾ 25 ರಷ್ಟು ಯಾರಿಂದ ಕಟ್ಟಿಸಿಕೊಂಡರು.

2-00 P.M.

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಇವನ್ನೆಲ್ಲಾ ಪರಿಶೀಲನೆ ಮಾಡಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಆಗಲೇ ಹೇಳಿದ್ದೇನೆ.

Sri S. SIVAPPA.—When they have deposited the amount according to the then conditions, why have the Government failed to take up the construction of the building in time ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಇವೆಲ್ಲಾ ವಿವರಗಳನ್ನು ಪರಿಶೀಲನೆ ಮಾಡಿ ಇದರಲ್ಲಿ ಸರಕಾರದ್ದು ತಪ್ಪಾಗಿದೆಯೇ ಇಲ್ಲವೇ ಯಾರಿಂದ ತಡವಾಗಿದೆ ಎನ್ನುವುದನ್ನು ನೋಡಿ ಯಾರಿಗೂ ಅನ್ಯಾಯವಾಗದಂತೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ಸಾರ್ವಜನಿಕ ವಿದ್ಯಾರ್ಥಿನಿಲಯದ ಎಸ್ಟಿಮೇಟು ಎಷ್ಟು ಆಗಿತ್ತು ಮತ್ತು ಶೇಕಡಾ 25 ರಷ್ಟು ಡಿಪಾಜಿಟ್ ಎಂದು ಎಷ್ಟು ಕಟ್ಟಿಸಿಕೊಂಡಿದ್ದೀರಿ ಮತ್ತು ಈಗ ಪುನಃ ರಿವೈಸ್ಡ್ ಎ ್ಟಮೇಟು ಎಷ್ಟಾಗಿದೆ ಮತ್ತು ಇದಕ್ಕೆಲ್ಲಾ ಜವಾಬುದಾರರು ಯಾರು ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಆ ವಿವರಗಳು ನನ್ನಲ್ಲಲ್ಲ. ಇದಕ್ಕೆ ನೋಟೀಸು ಬೇಕು.

Repairs to Talikote-Hoovinahippargi Road

556. Sri S. M. GURADDI (Muddebihal).—

Will the Minister for Public works be pleased the state :—

(*a*) Since when Talikote-Hoovina Hipparagi road has not been repaired;

(*b*) whether it is a fact that provision in respect of repairing this road has been made in the Budget for 1968-69;

(*c*) if so, the reason for not taking up the repair work of this road so far ?